# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ , ಕೃಷಿ ಅಧಿಕಾರಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ ಇವರ ವಿರುದ್ಧ ಲೋಕಾಯುಕ್ತ ಪ್ರಕರಣ.

*****

## ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 55 ಕೃಪವಿ 2010, ದಿನಾಂಕ: 06-10-2010.
2. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 55 ಕೃಪವಿ 2010, ದಿನಾಂಕ: 05-08-2011.
3. ಉಪಲೋಕಾಯುಕ್ತ , ಕರ್ನಾಟಕರವರ ವರದಿ ಸಂಖ್ಯೆ: ಕಂಪ್ಲೇಟ್/ಉಪಲೋಕ್, ಜಿ.ಎಲ್.ಬಿ.-1637/2012/ಎಆರ್‌ಇ-6, ದಿನಾಂಕ: 05-08-2012.

## ಪ್ರಸ್ತಾವನೆ:-

ಮೇಲೆ ಓದಲಾದ ಕ್ರಸಂ (1)ರಲ್ಲಿ ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ, ಕೋಲ್ಕಾರ, ಕೃಷಿ ಅಧಿಕಾರಿ, ಇವರು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗಂಗಾವತಿ ಇಲ್ಲಿ, ಕರ್ತವ್ಯ ನಿರ್ವಹಿಸುತ್ತಿದ್ದಾಗ ಶ್ರೀ ಶ್ರೀನಿವಾಸ ಬಿನ್ ಸತ್ಯನಾರಾಯಣ, ಮ್ಯಾನೇಜರ್ ಶ್ರೀ ರಾಘವೇಂದ್ರ ಇಂಜನಿರಿಂಗ್ ವರ್ಕ್ಸ್ ರಾಯಚೂರು ಇವರಿಂದ ಅಕ್ರಮ ಸಂಭಾವನೆ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕಿಬಿದ್ದ ಪ್ರಯುಕ್ತ ಅವರನ್ನು ಅವರ ಮೇಲಿನ ಲೋಕಾಯುಕ್ತ ಕ್ರೀಮಿನಲ್ ಮೊಕದ್ದಮೆ ಬಾಕಿಯಿರಿಸಿ, ಅವರನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿ 1957ರ ನಿಯಮ 10(1)(ಎ)ರನ್ವಯ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಹಾಗೂ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ: 05-08-2011ರ ಆದೇಶದಲ್ಲಿ ಅವರನ್ನು ಅವರ ಮೇಲಿನ ಲೋಕಾಯುಕ್ತ ಪ್ರಕರಣದ ವಿಚಾರಣೆಯನ್ನು ಬಾಕಿಯಿರಿಸಿ, ಅಮಾನತ್ತಿನಿಂದ ತೆರವುಗೊಳಿಸಿ, ರೈತ ಸಂಪರ್ಕ ಕೇಂದ್ರ ಗೋರೆಬಾಳು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಸಿಂಧನೂರು ಇಲ್ಲಿಗೆ ಇವರ ಸೇವೆಯನ್ನು ಪುನರ್ ಸ್ಥಾಪಿಸಲಾಯಿತು.

ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ದಿನಾಂಕ: 05-09-2012ರ ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತ, ಕರ್ನಾಟಕರವರು ಕೋರಿರುವಂತೆ ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ, ಕೋಲ್ಕಾರ, ಹಿಂದಿನ ಕೃಷಿ ಅಧಿಕಾರಿ ಇವರ ವಿರುದ್ದದ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತರ ಅಧಿನಿಯಮ 1984ರ ಸೆಕ್ಷನ್ 12(3)ರಡಿ ನೀಡಿದ ವರದಿಯಲ್ಲಿ ಸದರಿ ಅಧಿಕಾರಿಯವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಾಮಾವಳಿ 1966 ನಿಯಮ 3(1)ರ ಪ್ರಕಾರ ಲೋಪ ಎಸಗಿರುವುದು ಮೇಲ್ನೋಟಕ್ಕೆ ಧೃಡಪಟ್ಟಿರುವುದರಿಂದ, ಅವರ ವಿರುದ್ದ ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿ ವಿಚಾರಣಾ ಕ್ರಮವನ್ನು ಆಯೋಜಿಸಲು ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಪ್ರಕರಣವನ್ನು ತಮಗೆ

--2--

ವಹಿಸುವಂತೆ ಕೋರಿರುತ್ತಾರೆ. ಮಾನ್ಯ ಉಪಲೋಕಾಯುಕ್ತ-I, ಕರ್ನಾಟಕ, ರವರ ಕೋರಿಕೆಯಂತೆ ಪರಿಶೀಲಿಸಿ, ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ, ಕೃಷಿ ಅಧಿಕಾರಿ ಇವರು ಒಬ್ಬ ಸರ್ಕಾರಿ ಅಧಿಕಾರಿಯಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಾಮಾವಳಿ 1966ರ ನಿಯಮ 3(1)ನ್ನು ಉಲ್ಲಂಘಿಸಿರುತ್ತಾರೆಂಬ ಅಂಶದ ಮೇಲೆ ಅವರನ್ನು ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಪಡಿಸಲು ಅದೇ ನಿಯಮಾವಳಿ ನಿಯಮ. 14(ಎ) ರಡಿಯಲ್ಲಿ ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃತೋಇ 55 ಕೃಪವಿ 2010,**
**ಬೆಂಗಳೂರು, ದಿನಾಂಕ: 08-01-2013.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ, ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕರ, ಕೃಷಿ ಅಧಿಕಾರಿ ಇವರು ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಶ್ರೀ ರಾಘವೇಂದ್ರ ಇಂಜಿನಿಯರಿಂಗ್, ವರ್ಕ್ಸನ ಮ್ಯಾನೇಜರ್ ಶ್ರೀ ಶ್ರೀನಿವಾಸ ಬಿನ್ ಸತ್ಯನಾರಾಯಣ, ಡ್ಯಾಡಿ ಕಾಲೋನಿ ವಾಸಿ, ರಾಯಚೂರು, ಇವರಿಂದ ತಮ್ಮ ಸ್ಥಾನ ಕೃಪೆ ತೋರಿ ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಸಿಕ್ಕಿ ಬಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿ ವಿಚಾರಣಾ ಕ್ರಮವನ್ನು ಆಯೋಜಿಸಲು ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಪ್ರಕರಣವನ್ನು ಕರ್ನಾಟಕ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು. ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.

3. ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಜಂಟಿ ಕೃಷಿ ನಿರ್ದೇಶಕರು, ರಾಯಚೂರು.
5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸಹಾಯಕ ಕೃಷಿ ನಿರ್ದೇಶಕರು, ಸಿಂಧನೂರು, ರಾಯಚೂರು ಜಿಲ್ಲೆ.
7. ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕರ, ಕೃಷಿ ಅಧಿಕಾರಿ (ಕೃಷಿ ಆಯುಕ್ತರ ಮೂಲಕ)
8. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಕಾರ್ಯದರ್ಶಿ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.